OS No.40/2016 PW-1

<u>ದಿನಾಂಕ **05.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ವಕೀಲರಿಂದಃ</u>

ನಾನು ಶ್ರೀ ಲಕ್ಷ್ಮೀ ಗೋಲ್ಡ್ ಖಜಾನಾ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ವಾದಿರವರು ಶ್ರೀ ಲಕ್ಷ್ಮೀ ಗೋಲ್ಡ್ ಖಜಾನಾ ಕಂಪನಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ವಾದಿಯವರು ರಾಜಕೀಯ ನಾಯಕ. ಪ್ರತಿವಾದಿ 1 ರ ವ್ಯವಹಾರ ಮತ್ತು ಆಸ್ತಿಯ ಬಗ್ಗೆ ಗೊತ್ತಿಲ್ಲ. ನಿಪಿ-2 ರ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿಲ್ಲ. ನಿಪಿ-2 ಕಲರ್ ಜೆರಾಕ್ಸ್ ಪತ್ರ ಎಂದರೆ ನಿಜ. ನಿಪಿ-2 ರಲ್ಲಿ ಸಾಕ್ಷಿದಾರರು ಮತ್ತು ಬರಹಗಾರರ ಸಹಿ ಇಲ್ಲ ಎಂದರೆ ನಿಜ. ನಿಪಿ-3 ರ ಹಣ ಸಂದಾಯ ರಶೀದಿಯಲ್ಲಿ ಸಾಕ್ಷಿದಾರರು ಮತ್ತು ಬರಹಗಾರರ ಸಹಿ ಇಲ್ಲ ಎಂದರೆ ನಿಜ. ನಿಪಿ-3 ಕ್ಕೆ ವಾದಿಯ ಸಹಿ ಇಲ್ಲ ಎಂದರೆ ನಿಜ. ನಿಪಿ-2 ಕಲರ್ ಜೆರಾಕ್ಸ್ ಪತ್ರದ ಬಗ್ಗೆ ನ್ಯಾಯಾಲಯಕ್ಕೆ ದಾವಾ ಹಾಕಿದ ನಂತರ ಗೊತ್ತಾಗಿರುತ್ತದೆ. ನಾವು ಪ್ರತಿವಾದ ಪತ್ರ ಸಲ್ಲಿಸಿದ ನಂತರ ನಿಪಿ2 ರ ಕಲರ್ ಜೆರಾಕ್ಸ್ ಪತ್ರದ ಬಗ್ಗೆ ನಮಗೆ ಗೊತ್ತಾಗಿರುತ್ತದೆ ಎಂದರೆ ನಿಜ. ದಿಃ24.03.2016 ರಲ್ಲಿ ಪ್ರತಿವಾದಿ ನಮಗೆ ನೋಟೀಸ್ ಕೊಟ್ಟಿದ್ದಾರೆಂದರೆ ನಿಜ. ದಿಃ07.04.2016 ರಲ್ಲಿ ನಾವು ಪ್ರತ್ಯುತ್ತರ ಕೊಟ್ಟಿರುತ್ತೇವೆಂದರೆ ನಿಜ. ದಿಃ28.10.2015 ರಲ್ಲಿ ನಿಪಿ-2 ರ ಮೂಲ ಕರಾರು ಪತ್ರವನ್ನು ಪ್ರತಿವಾದಿಗೆ ಕೊಟ್ಟಿರುತ್ತೇವೆಂದು ತಿಳಿಸಿರುತ್ತೇವೆ. ನಮ್ಮ ಅಂಗಡಿಯಲ್ಲಿ ಸಿ.ಸಿ ಟಿ.ವಿ ಕ್ಯಾಮಾರಾ ಆ ಸಮಯದಲ್ಲಿ ಇತ್ತು. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅದು ಲಿಮಿಟೆಡ್ ಸಮಯ ಇರುತ್ತದೆ ಎಂದು ಹೇಳುತ್ತಾರೆ. ದಿಃ28.10.2015 ರಲ್ಲಿ ನಿಪಿ-2 ರ ಮೂಲ ಕರಾರು ಪತ್ರವನ್ನು ತೆಗೆದುಕೊಂಡು ಹೋದಾಗ ಸಾಕ್ಷಿದಾರರು ಇರುವ ಬಗ್ಗೆ ನೆನಪಿಲ್ಲ.. ದಿಃ14.09.2016 ರಲ್ಲಿ ಪ್ರತಿವಾದಿಯವರು ನಮಗೆ 30 ಲಕ್ಷ ಕೊಟ್ಟು ಮೂಲ ಕ್ರಯ ಪತ್ರವನ್ನು ಪಡೆದಿದ್ದಾರೆಂದು ಲಿಖಿತ ವಾದ ಪತ್ರದಲ್ಲಿ ತಿಳಿಸಿರುತ್ತಾರೆಂದರೆ ಸಾಕ್ಷಿಯು ಲಿಖಿತ ವಾದ ಪತ್ರ ನೋಡಬೇಕು ಎಂದು ಹೇಳುತ್ತಾರೆ

ಪ್ರತಿವಾದಿಯ ವಿರುದ್ಧ ಯಾವುದೇ ದೂರು ನೀಡಿಲ್ಲ. ದಾವಾ ಹಾಕುವಾಗಿ ನಿಪಿ-2 ಅನ್ನು ಅಸಲು ಪತ್ರ ಎಂದು ಕೊಟ್ಟಿದ್ದೆವು. ದಾವಾ ನಡೆಯುವಾಗ ಪ್ರತಿವಾದಿಯವರು ನಿಪಿ-2 ರ ಮೂಲ ಕರಾರು ಪತ್ರವನ್ನು ಹಾಜರು ಮಾಡಲು ಅರ್ಜಿ ಹಾಕಿದ್ದರು ಎಂದರೆ ನಿಜ. ನಾವು ಹಾಜರುಮಾಡಲಿಲ್ಲ ಎಂದರೆ ನಿಜ.

2. ದಿಃ19.02.2018 ರಲ್ಲಿ ಪ್ರತಿವಾದಿಯವರು ಮೂಲ ಕರಾರು ಪತ್ರವನ್ನು ಹಾಜರು ಮಾಡಿದರು ಎಂದರೆ ಸಾಕ್ಷಿಯು ಸಲ್ಲಿಸಿರಬಹುದು ಎಂದು ನುಡಿಯುತ್ತಾರೆ. ಆದ್ದರಿಂದ ಮಧ್ಯಂತರ ಅರ್ಜಿ 1 ನ್ಯಾಯಾಲಯದಲ್ಲಿ ವಜಾ ಆಯಿತು. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಿ ಅಲ್ಲಿಯೂ ಸಹ ಕೆಲವು ನಿರ್ದೇಶನಗಳೊಂದಿಗೆ ಇದೇ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಾನೇ ದಿಃ28.10.2015 ರಂದು ಮೂಲ ಕರಾರು ಪತ್ರವನ್ನು ಪ್ರತಿವಾದಿಯರಿಗೆ ಹಸ್ತಾಂತರಿಸಿರುತ್ತೇನೆ ಎಂದರೆ ಸುಳ್ಳು ಪ್ರತಿವಾದಿಯವರು ಪೂರ್ತಿ ಹಣವನ್ನು ಸಂದಾಯ ಮಾಡಿ ಮೂಲ ಪತ್ರವನ್ನು ಪಡೆದಿದ್ದಾರೆಂದರೆ ಸುಳ್ಳು. ಪ್ರತಿವಾದಿಯವರ ವಿರುದ್ಧ 2018 ರಲ್ಲಿ ಮಲ್ಲೇಶ್ವರಂ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದೇವೆ ಪ್ರತಿವಾದಿ ಪತ್ರ ಸಲ್ಲಿಸಿದ 2 ವರ್ಷಗಳ ನಂತರ ಹಾಕಿದ್ದೇವೆ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದ ತಕ್ಷಣ ಹಾಕಿದ್ದೇವೆ ಎಂದು ನುಡಿಯುತ್ತಾರೆ. ಮೇಲಿನ ಪ್ರಕರಣದಲ್ಲಿ ಪೋಲಿಸರು ಬಿ ವರದಿಯನ್ನು ಸಲ್ಲಿಸಿರುತ್ತಾರೆಂದರೆ ಗೊತ್ತಿಲ್ಲ. ಠಾಣೆಯವರು 3 ಬಾರಿ ನೋಟೀಸನ್ನು ನೀಡಿದ್ದಾರೆಂದರೆ ನಿಜ. ಕ್ರಿಮಿನಲ್ ಪ್ರಕರಣದ ಮೇಲೆ ನ್ಯಾಯಾಲಯದಿಂದ ನನಗೆ ನೋಟೀಸ್ ಬಂದಿತ್ತು ಎಂದರೆ ಸುಳ್ಳು. ಈ ಪ್ರಕರಣ ಏನಾಗಿದೆ ಎಂದು ತಿಳಿದುಕೊಂಡಿಲ್ಲ.

3. 1 ನೇ ಪ್ರತಿವಾದಿಯವರು ಜಮೀನ್ದಾರ್ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರಿಗೆ ಬಿಸಿನೆಸ್, ರೆಸಾರ್ಟ್ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-2 ರ ಕರಾರು ಪತ್ರಕ್ಕೆ ಕಾನೂನು ಮಾನ್ಯತೆ ಇಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.